**ಬಳ್ಳಿಯ ಸ್ವಚ್ಛತೆ ಮತ್ತು ಸವರುವಿಕೆ:** ಪ್ರತಿ ವರ್ಷ ಬಳ್ಳಿಯನ್ನು ಸ್ವಚ್ಛ ಮಾಡುವುದು ಮುಖ್ಯ. ರೋಗ ಮತ್ತು ಕೀಟ ಬಾಧೆಗೆ ತುತ್ತಾದ ಗೆಲ್ಲುಗಳು, ಒಣಗಿರುವ, ದಟ್ಟವಾಗಿ ಬೆಳೆದ ಗೆಲ್ಲುಗಳನ್ನು ಸವರಿ ಗಿಡಕ್ಕೆ ಚೆನ್ನಾಗಿ ಗಾಳಿ, ಬೆಳಕು ಆಡುವ ಹಾಗೆ ನೋಡಿಕೊಳ್ಳಬೇಕು. ಗಿಡದಲ್ಲಿ ಆಗಾಗ ಮೂಡುವ ನೀರು ಕಂದುಗಳನ್ನು (ಹಬ್ಬುವ ಗೆಲ್ಲುಗಳು) ಕತ್ತರಿಸಿ ತೆಗೆಯುತ್ತಿರಬೇಕು.

ಸಾಮಾನ್ಯವಾಗಿ ಮಲ್ಲಿಗೆ ಬಳ್ಳಿಯನ್ನು ಸವರುವಾಗ ಭೂಮಿಯಿಂದ 2 ಅಡಿ ಎತ್ತರದಲ್ಲಿ ಗೆಲ್ಲುಗಳನ್ನು ಕತ್ತರಿಸಿ ತೆಗೆಯಬೇಕು. ಗೆಲ್ಲುಗಳನ್ನು ಕತ್ತರಿಸಿದ ನಂತರ ಕತ್ತರಿಸಿದ ಭಾಗಕ್ಕೆ ಬೋರ್ಡೋ ಮುಲಾಮು ಹಚ್ಚಿ ಉಪಚರಿಸಬೇಕು. ಉಡುಪಿ ಮಲ್ಲಿಗೆಗೆ ವರ್ಷದ ಎಲ್ಲಾ ತಿಂಗಳುಗಳಲ್ಲಿ ಬೇಡಿಕೆ ಇರುವುದರಿಂದ ಒಂದೇ ಬಾರಿ ಎಲ್ಲಾ ಗಿಡಗಳನ್ನು ಸವರಿದರೆ ಹೂ ಪಡೆಯಲು ಒಂದು ತಿಂಗಳು ಕಾಯಬೇಕಾಗುತ್ತದೆ ಆದ್ದರಿಂದ ರೈತರು ಒಂದೇ ಬಾರಿ ಗಿಡಗಳನ್ನು ಸವರುವ ಬದಲು ಗಿಡ ನೆಟ್ಟ 3 ವರ್ಷಗಳ ನಂತರ ಪ್ರತಿ ವರ್ಷ 5 ರಿಂದ 10 ಗಿಡಗಳಂತೆ ಹಂತ ಹಂತವಾಗಿ ಸವರುವುದು ಒಳ್ಳೆಯದು. ಈ ವಿಧಾನದಲ್ಲಿ ಸವರಿದ ಗಿಡಗಳಿಂದ ಬಲಿಷ್ಠವಾದ ಮತ್ತು ಆರೋಗ್ಯಯುತವಾದ ಗೆಲ್ಲುಗಳು ಉತ್ಪತ್ತಿಯಾಗಿ ಹೂಗಳ ಗುಣಮಟ್ಟ ಸಹ ಉತ್ತಮವಾಗಿರುತ್ತದೆ. ಅಲ್ಲದೆ ಗಿಡಗಳಿಗೆ ಉತ್ತಮ ಆಕಾರವನ್ನು ಕೊಡಲು ಸಾಧ್ಯವಾಗುತ್ತದೆ. ಗಿಡಗಳ ಸವರುವಿಕೆಯಿಂದ ಪುನಶ್ಚೇತನಗೊಂಡು ಹೊಸ ಚಿಗುರೊಡೆದು ಹೆಚ್ಚು ಹೂ ಬಿಡಲು ಪ್ರಾರಂಭಿಸುತ್ತವೆ. ಗಿಡಗಳನ್ನು ಸವರಲು ಸೂಕ್ತ ಕಾಲ ಎಂದರೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳು.

**ಕೊಯ್ಲು ಮತ್ತು ಇಳುವರಿ :** ಮಲ್ಲಿಗೆ ಗಿಡಗಳನ್ನು ನಾಟಿ ಮಾಡಿದ 6ನೇ ತಿಂಗಳ ನಂತರ ಹೂ ಕೊಯ್ಲು ಮಾಡಲು ಪ್ರಾರಂಭಿಸಬಹುದು. ನಾಟಿ ಮಾಡಿದಾಗಿನಿಂದಲೆ ಕ್ರಮವರಿತು ಕೃಷಿ ಮಾಡಿದರೆ ಮೊದಲ ವರ್ಷವೇ ಆರ್ಥಿಕ ಲಾಭ ಪಡೆಯಬಹುದು. ಗಿಡ ನೆಟ್ಟ 3 ವರ್ಷಗಳ ನಂತರ ಆರ್ಥಿಕ ಇಳುವರಿ ಪ್ರಾರಂಭವಾಗಿ ಸುಮಾರು 15 ರಿಂದ 20 ವರ್ಷಗಳವರೆಗೆ ಮಲ್ಲಿಗೆಯು ಹೆಚ್ಚು ಇಳುವರಿ ಕೊಡುವುದು. ಎಲ್ಲಾ ಬೇಸಾಯ ಕ್ರಮಗಳನ್ನು ಅನುಸರಿಸಿದರೆ ಪ್ರತಿ ಒಂದು ಗಿಡದಲ್ಲಿ ಮೊದಲನೇ ವರ್ಷ 0.5 ಕಿ.ಗ್ರಾಂ., ಎರಡನೇ ವರ್ಷ 1.5 ಕಿ.ಗ್ರಾಂ., 3ನೇ ವರ್ಷ 2.5 .ಗ್ರಾಂ. ಹಾಗೂ 4ನೇ ವರ್ಷ 3 ಕಿ.ಗ್ರಾಂ. ಹೂವಿನ ಇಳುವರಿ ಪಡೆಯಬಹುದು. ಮಲ್ಲಿಗೆ ಮೊಗ್ಗುಗಳು ಅರಳುವ ಮುಂಚೆ ಹೂ ಬಿಡಿಸಿ, ಸ್ಥಳೀಯ ಮಾರುಕಟ್ಟೆಯ ನಿಯಮಾನುಸಾರವಾಗಿ ಚೆಂಡು ಕಟ್ಟಿ ಮಾರುಕಟ್ಟೆಗೆ ಕಳುಹಿಸಬಹುದು.

**ಸಸ್ಯ ಸಂರಕ್ಷಣೆ**

**ರೋಗಗಳು:** ಉಡುಪಿ ಮಲ್ಲಿಗೆಗೆ ಬರುವ ಪ್ರಮುಖ ರೋಗಗಳೆಂದರೆ ಎಲೆ ಚುಕ್ಕೆ ರೋಗ, ಸೊರಗು ರೋಗ, ತುಕ್ಕು ರೋಗ ಮತ್ತು ಬೂದಿ ರೋಗ.

**1. ಎಲೆ ಚುಕ್ಕೆ ರೋಗ:** ಇದು ಉಡುಪಿ ಮಲ್ಲಿಗೆಗೆ ಬರುವ ಪ್ರಮುಖ ರೋಗ. ಈ ರೋಗವು ಉಷ್ಣಾಂಶದಲ್ಲಿ ವ್ಯತ್ಯಾಸವಾದರೆ ಮತ್ತು ತೇವಾಂಶದ ವಾತಾವರಣ ಇದ್ದರೆ ಕಂಡು ಬರುತ್ತದೆ. ಈ ರೋಗಕ್ಕೆ ತುತ್ತಾದ ಗಿಡಗಳಲ್ಲಿ ಆರಂಭದಲ್ಲಿ ಎಲೆಗಳ ಮೇಲೆ ಸಣ್ಣ ಸಣ್ಣದಾದ ಚುಕ್ಕೆಗಳು ಕಂಡು ಬರುತ್ತವೆ. ರೋಗದ ಬಾಧೆ ತೀವ್ರವಾದಾಗ ಈ ಚುಕ್ಕೆಗಳು ದೊಡ್ಡದಾಗಿ ವಿಲೀನಗೊಂಡು ಮಚ್ಚೆಗಳಾಗಿ ಎಲೆಗಳು ಒಣಗಿ ಉದುರುತ್ತವೆ. ಈ ಚುಕ್ಕೆಗಳ ಮಧ್ಯಭಾಗ ಬಿಳುಪಾಗಿದ್ದು ಸುತ್ತಲೂ ಕಪ್ಪು ಅಥವಾ ಕಂದು ಬಣ್ಣದಿಂದ ಕೂಡಿರುತ್ತದೆ.

**ಹತೋಟಿ:** ಮಲ್ಲಿಗೆ ಬೆಳೆಯುವ ತೋಟವನ್ನು ಶುಚಿಯಾಗಿ ಇಡಬೇಕು. ರೋಗದ ಹತೋಟಿಗೆ ಪ್ರತಿ ಲೀಟರ್ ನೀರಿಗೆ 1 ಗ್ರಾಂ. ಕಾರ್ಬೆಡೆಜಿಯಂ ಅಥವಾ 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡನ್ನು ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು.

**2. ಸೊರಗು ರೋಗ:** ಈ ರೋಗವು ಮಣ್ಣು ಜನ್ಯವಾಗಿದ್ದು, ತೇವಾಂಶ ಜಾಸ್ತಿ ಇರುವ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಈ ರೋಗದ ಮುಖ್ಯ ಲಕ್ಷಣಗಳೆಂದರೆ ಆರಂಭದಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತಾ ಹೋಗುತ್ತವೆ. ರೋಗ ತೀವ್ರವಾದಾಗ ಎಲೆಗಳೆಲ್ಲಾ ಒಣಗಿ ಉದುರಿ ಹೋಗುತ್ತವೆ. ನಂತರ ಗಿಡ ಸಂಪೂರ್ಣವಾಗಿ ಸೊರಗಿ ಸಾಯುತ್ತವೆ. ಇಂತಹ ಸೊರಗಿದ ಗಿಡದ ಬೇರನ್ನು ಕಿತ್ತು ನೋಡಿದಾಗ ಬೇರಿನಲ್ಲಿ ಕಂದು ಬಣ್ಣದ ಮಚ್ಚೆಯನ್ನು ಕಾಣಬಹುದು.

**ಹತೋಟಿ:** ಭೂಮಿಯಲ್ಲಿ ನೀರು ಚೆನ್ನಾಗಿ ಬಸಿದು ಹೋಗುವ ಹಾಗೆ ನೋಡಿಕೊಳ್ಳಬೇಕು. ರೋಗಕ್ಕೆ ತುತ್ತಾದ ಗಿಡದ ಬುಡಕ್ಕೆ 1 ಗ್ರಾಂ. ಕಾರ್ಬೆಡೆಜಿಯಂ ಶಿಲೀಂಧ್ರ ನಾಶಕವನ್ನು ಒಂದು ಲೀಟರ್ ನೀರಿನಲ್ಲಿ ಬೆರೆಸಿ ಪ್ರತಿ ಗಿಡದ ಬುಡ ಭಾಗಕ್ಕೆ ಎರಡರಿಂದ ಐದು ಲೀಟರ್ ನಷ್ಟು ಹಾಕಬೇಕು.

**ಕೀಟಗಳು:** ಮಲ್ಲಿಗೆಯಲ್ಲಿ ಸಾಮಾನ್ಯವಾಗಿ ಈ ಕೆಳಕಂಡ ಕೀಟಗಳು ಹಾನಿ ಮಾಡುತ್ತವೆ. ಅವುಗಳೆಂದರೆ

**1. ಬಿಳಿ ನೊಣ:** ಬಿಳಿ ನೊಣಗಳು ಎಲೆಗಳ ಕೆಳಗೆ ಮುತ್ತಿ ರಸವನ್ನು ಹೀರುತ್ತವೆ. ಇದರಿಂದ ಗಿಡಗಳ ಬೆಳವಣಿಗೆಯು ಕುಗ್ಗುತ್ತದೆ. ಇವುಗಳು ಎಲೆಗಳ ಮೇಲೆ ಸಿಹಿ ದ್ರವವನ್ನು ಸ್ರವಿಸುವುದರಿಂದ ಅದರ ಮೇಲೆ ಕಪ್ಪು ಬೂಷ್ಟು ಬೆಳೆಯುತ್ತದೆ. ಇದರಿಂದ ದ್ಯುತಿಸಂಶ್ಲೇಷಣೆ ಕ್ರಿಯೆಗೆ ಅಡ್ಡಿಯುಂಟಾಗಿ ಇಳುವರಿಯಲ್ಲಿ ಕುಂಠಿತವಾಗುತ್ತದೆ.

**ಹತೋಟಿ ಕ್ರಮ:** ಈ ಕೀಟದ ಬಾಧೆ ಕಂಡುಬಂದಾಗ 2.0 ಮಿ.ಲೀ. ಆಕ್ಸಿಡೆಮೆಟಾನ್ ಮಿಥೈಲ್ 25 ಇ.ಸಿ. ಅಥವಾ 2 ಮಿ.ಲೀ. ಮೆಲಾಥಿಯನ್ 50 ಇ.ಸಿ. ಮತ್ತು 3 ಗ್ರಾಂ. ನೀರಿನಲ್ಲಿ ಕರಗುವ ಗಂಧಕ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

**2. ಎಲೆ ಮತ್ತು ಮೊಗ್ಗು ತಿನ್ನುವ ಹುಳು:** ಹಸಿರು ಮರಿ ಕೀಟವು ಎಳೆಯ ಎಲೆಗಳನ್ನು ಮಡಚಿ ಹಸಿರು ಭಾಗವನ್ನು ತಿನ್ನುತ್ತದೆ ಅಲ್ಲದೆ ಕೆಲವು ಸಂದರ್ಭದಲ್ಲಿ ಮೊಗ್ಗುಗಳನ್ನು ಒಟ್ಟುಗೂಡಿಸಿ ಹೆಣೆದು ತಿನ್ನುವುದನ್ನು ಕೂಡಾ ಕಾಣಬಹುದು.

**ಹತೋಟಿ ಕ್ರಮ:** 1.5 ಮಿ.ಲೀ. ಮೊನೋಕ್ರೊಟೋಫಾಸ್ 36 ಎಸ್.ಎಲ್ ಕೀಟನಾಶಕವನ್ನು ಪ್ರತೀ ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

**3. ಕೆಂಪು ಶಲ್ಕ ಕೀಟ:** ಈ ಕೀಟವು ಬೆಳೆದ ರೆಂಬೆಯ ಮೇಲೆ ಮೆತ್ತಿಕೊಂಡಿರುತ್ತವೆ. ಪ್ರೌಢ ಮತ್ತು ಮರಿ ಕೀಟವೆರಡೂ ರಸ ಹೀರುವುದರಿಂದ ಗಿಡದ ಬೆಳವಣಿಗೆಯು ಕುಂಠಿತವಾಗುತ್ತದೆ. ಮಳೆಗಾಲದ ಮುಂಚೆ ಮತ್ತು ಮಳೆಗಾಲದ ನಂತರ ಇದರ ತೀವ್ರತೆಯನ್ನು ಕಾಣಬಹುದು.

**ಹತೋಟಿ ಕ್ರಮ:** ಪ್ರತಿ ಒಂದು ಲೀಟರ್ ನೀರಿನಲ್ಲಿ 2 ಮಿ.ಲೀ. ಮೆಲಥಿಯಾನ್ 50 ಇ.ಸಿ. ಮತ್ತು 3 ಗ್ರಾಂ. ನೀರಿನಲ್ಲಿ ಕರಗುವ ಗಂಧಕವನ್ನು ಬೆರೆಸಿ ಬಾಧೆ ಕಂಡು ಬಂದಾಗ ಸಿಂಪಡಿಸಬೇಕು.

Technical Folder Series No. 10/2020

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು

## ಉಡುಪಿ ಮಲ್ಲಿಗೆಯ ಸುಧಾರಿತ ಬೇಸಾಯ ಕ್ರಮಗಳು – ಕರಾವಳಿಯ ಪ್ರದೇಶದ ಸಣ್ಣ ಹಿಡುವಳಿದಾರರಿಗೆ ಸುಸ್ಥಿರ ಆದಾಯದ ಮೂಲ




ತಾಂತ್ರಿಕ ಮಾಹಿತಿ :

ಡಾ. ರಶ್ಮಿ ಆರ್.

ಡಾ. ರಮೇಶ ಟಿ. ಜೆ.

ಡಾ. ಚೇತನ್ ಎನ್.

ಡಾ. ಕೇದಾರನಾಥ

ಡಾ. ನವೀನ್ ಕುಮಾರ್ ಬಿ. ಟಿ.

ಡಾ. ಮಲ್ಲಿಕಾರ್ಜುನ ಎಲ್.

ಡಾ. ಶೋಧನ್ ಕೆ.ವಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,

ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,

ಮಂಗಳೂರು, ದಕ್ಷಿಣ ಕನ್ನಡ – 575002

www.kvkdk.org, kvkdk@rediffmail.com, 0824–2431872

ಮೇ, 2020

ಉಡುಪಿ ಮಲ್ಲಿಗೆಯ ವೈಜ್ಞಾನಿಕ ಹೆಸರು ಜಾಸ್ಮಿನಿಯಮ್ ಸಾಂಬ್ಯಾಕ್ "ಆನಿಯಾನಮ್". ಪರಿಮಳ ಬೀರುವ ಮಲ್ಲಿಗೆ ಮನೆಯ ಅಂಗಳದಲ್ಲಿದ್ದರಂತೋ ಇಡೀ ವಾತಾರಣಕ್ಕೆ ಒಂದು ಶೋಭೆ. ಮಲ್ಲಿಗೆಯನ್ನು ಬಡವ ಬಲ್ಲಿದ, ಹೆಣ್ಣು-ಗಂಡು, ದೊಡ್ಡವರು, ಚಿಕ್ಕವರು ಎಂಬ ಬೇಧಭಾವವಿಲ್ಲದೆ ಮುಡಿಯಲು, ಪೂಜೆಗೆ, ಅತಿಥಿ ಸತ್ಕಾರಕ್ಕೆ, ಸಭಾಂಗಣ ಅಲಂಕಾರಕ್ಕೆ ಉಪಯೋಗಿಸಲಾಗುತ್ತದೆ. ಇದಲ್ಲದೆ ಮಲ್ಲಿಗೆ ಹೂವನ್ನು ಸಂಸ್ಕರಿಸಿ ಸುಗಂಧ ತೈಲ ಉತ್ಪಾದನೆಯಲ್ಲೂ ಬಳಸಲಾಗುತ್ತದೆ. ಇದರಿಂದಲೇ ಮಲ್ಲಿಗೆಯನ್ನು "ಪುಷ್ಪಗಳ ರಾಣಿ" ಎಂದು ಕರೆಯುತ್ತಾರೆ.

ಉಡುಪಿ ಮಲ್ಲಿಗೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 32 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು 64 ಟನ್ ಹೂಗಳನ್ನು ಉತ್ಪಾದಿಸಲಾಗುತ್ತಿದೆ. ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರೈತರು ಮೊಗ್ಗುಗಳನ್ನು ಬಿಡಿಸಿ ಚೆಂಡುಗಳನ್ನು ಕಟ್ಟಿ ಸ್ಥಳೀಯ ಮಾರುಕಟ್ಟೆಗೆ ಮತ್ತು ವಿಮಾನ ಮೂಲಕ ಮುಂಬಯಿ, ದೆಹಲಿ, ಅಹಮದಾಬಾದ್ ನಗರಗಳಿಗೆ ಮತ್ತು ಸೌದಿ ದೇಶಗಳಿಗೆ ಕಳುಹಿಸುತ್ತಾರೆ.

**ಉಡುಪಿ ಮಲ್ಲಿಗೆಯ ಗುಣಲಕ್ಷಣಗಳು:** ಸಾಮಾನ್ಯವಾಗಿ ಇದು ಪೊದೆಯಾಕಾರದಲ್ಲಿ ಬೆಳೆಯುವ ತಳಿಯಾಗಿದ್ದು ಎಲೆಗಳು ಅಂಡಾಕಾರ ಅಥವಾ ಹೃದಯಾಕಾರವಿರುತ್ತದೆ. ಸುಗಂಧದ ಅಂಶ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ ಹೂಗಳೂ ಬೇಗ ಬಾಡುವುದಿಲ್ಲ. ಇದರ ಮೊಗ್ಗುಗಳು ಕೊಯ್ಲು ಮಾಡಿದ 10–12 ಘಂಟೆಗಳವರೆಗೂ ಅರಳುವುದಿಲ್ಲ ಮತ್ತು ಬಾಡುವುದಿಲ್ಲ. ಹಾಗಾಗಿ ದೂರದ ನಗರಗಳಿಗೆ ಹೂಗಳನ್ನು ಕಳುಹಿಸುವುದು ಸುಲಭ. ಈ ತಳಿಯ ಗಿಡಗಳು ಮಾರ್ಚ್‌ನಿಂದ – ಸೆಪ್ಟೆಂಬರ್ ಮತ್ತು ಡಿಸೆಂಬರ್ – ಫೆಬ್ರವರಿ ತಿಂಗಳುಗಳಲ್ಲಿ ಅತಿ ಹೆಚ್ಚು ಹೂ ಬಿಡುತ್ತವೆ. ಉಳಿದ ಅವಧಿಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹೂ ಬಿಡುವುದನ್ನು ಕಾಣಬಹುದು.

**ಹವಾಗುಣ ಮತ್ತು ಪ್ರದೇಶ:** ಉಡುಪಿ ಮಲ್ಲಿಗೆ ಕರಾವಳಿಯ ಎಲ್ಲಾ ಪ್ರದೇಶಕ್ಕೂ ಹೊಂದಿಕೊಂಡು ಬೆಳೆಯುವ ಶಕ್ತಿ ಹೊಂದಿದೆ. ಮಲ್ಲಿಗೆಯನ್ನು ಸಮತಟ್ಟಾದ ಹಾಗೂ ಬೆಟ್ಟ ಪ್ರದೇಶದ ಇಳಿಜಾರು ಪ್ರದೇಶಗಳಲ್ಲೂ ಸಹ ಬೆಳೆಯಬಹುದು. ಉತ್ತರ ಮತ್ತು ಪೂರ್ವ ದಿಕ್ಕಿನಿಂದ ಬೀಳುವ ಸೂರ್ಯನ ಬೆಳಕು ಗಿಡದ ಬೆಳವಣಿಗೆಗೆ ಸಹಕಾರಿ. ದಿನಪೂರ್ತಿ ಸೂರ್ಯನ ಬೆಳಕು ಮಲ್ಲಿಗೆ ಪೊದೆಯ ಮೇಲೆ ಬಿದ್ದರೆ ಗಿಡದ ಬೆಳವಣಿಗೆ ಉತ್ತಮವಾಗಿರುತ್ತದೆ. ಮಲ್ಲಿಗೆಯನ್ನು ನೆಡುವ ಮುಂಚೆ ಆಯ್ಕೆ ಮಾಡಿಕೊಂಡ ಸ್ಥಳದಲ್ಲಿ ಬೆಳೆದಿರುವ ಕಳೆ ಮತ್ತು ಇತರೆ ಅನಾವಶ್ಯಕ ಗಿಡಗಳನ್ನು ತೆಗೆದು ಸ್ವಚ್ಛ ಮಾಡಬೇಕು.

**ಮಣ್ಣು:** ಸಾಮಾನ್ಯವಾಗಿ ಸಾವಯವ ಪದಾರ್ಥಗಳಿಂದ ಕೂಡಿದ ಮರಳು ಮಿಶ್ರಿತ, ಕೆಂಪು ಗೋಡು, ಮರಳು ಮಿಶ್ರಿತ ಗೋಡು ಮಣ್ಣುಗಳಲ್ಲಿ ಬೆಳೆಯಬಹುದು ಮತ್ತು ನೀರು ಬಸಿದು ಹೋಗುವ ಪ್ರದೇಶ ಮಲ್ಲಿಗೆಗೆ ಸೂಕ್ತ. ಬೇರಿನ ಭಾಗದಲ್ಲಿ ನೀರು ಹೆಚ್ಚು ಕಾಲ ನಿಂತರೆ ಗಿಡಗಳು ಸಾಯುತ್ತವೆ. ಅತಿ ಜೇಡಿ ಮಣ್ಣು ಮತ್ತು ಅಧಿಕ ಮರಳು ಮಿಶ್ರಿತ ಮಣ್ಣುಗಳಿದ್ದರೆ ಅವು ಬೆಳೆಗೆ ಯೋಗ್ಯವಲ್ಲ. ಜಂಬಿಟ್ಟಿಗೆ ಮಣ್ಣಿನಲ್ಲಿ ಹೆಚ್ಚು ಸಾವಯವ ಗೊಬ್ಬರ ಮಿಶ್ರಣ ಮಾಡಿ ಸಹ ಬೆಳೆಯಬಹುದು.

**ಸಸ್ಯಾಭಿವೃದ್ಧಿ:** ಉಡುಪಿ ಮಲ್ಲಿಗೆಯ ಕಾಂಡದ ತುದಿ ಭಾಗವನ್ನು ಉಪಯೋಗಿಸಿಕೊಂಡು ವೃದ್ಧಿ ಮಾಡಬಹುದು. ಚೆನ್ನಾಗಿ ಬಲಿತು ಮೃದುವಾಗಿರುವ 12 ರಿಂದ 15 ಸೆಂ.ಮೀ. ಉದ್ದವಿರುವ ಕಾಂಡದ ಮೇಲ್ಭಾಗವನ್ನು ಕತ್ತರಿಸಿಕೊಂಡು ಮರಳು ಮತ್ತು ಸ್ವಲ್ಪ ಪ್ರಮಾಣದಲ್ಲಿ ಚೆನ್ನಾಗಿ ಕೊಳೆತ ಕಾಂಪೋಸ್ಟ್ ಮಿಶ್ರಣ ಮಾಡಿ ತಯಾರಿಸಿದ ಪಾತಿಯಲ್ಲಿ ಕಾಂಡದ ತುಂಡುಗಳನ್ನು 45 ಡಿಗ್ರಿ ಓರೆಯಾಗಿ ನೆಡಬೇಕು. ಕಾಂಡದ ತುಂಡುಗಳನ್ನು ನೆಡುವ ಮುಂಚೆ ಕತ್ತರಿಸಿದ ಭಾಗವನ್ನು 2000–2500 ಪಿ.ಪಿ.ಎಂ. ಇಂಡೋಲ್ ಬ್ಯೂಟ್ರಿಕ್ ಆಮ್ಲದಲ್ಲಿ (IBA) 30 ಸೆಕೆಂಡ್‌ಗಳ ಕಾಲ ಅದ್ದಿ ತೆಗೆದು ನಾಟಿ ಮಾಡಿದ್ದಲ್ಲಿ ಹೆಚ್ಚು ಬೇರು ಪಡೆಯಲು ಸಾಧ್ಯವಾಗುತ್ತದೆ. ಈ ವಿಧಾನದಲ್ಲಿ ಕಾಂಡದ ತುಂಡುಗಳನ್ನು ಪಾತಿಗಳಲ್ಲಿ ಅಥವಾ ಸಣ್ಣ ಪ್ಲಾಸ್ಟಿಕ್ ತೊಟ್ಟೆಯಲ್ಲಿ ನೆಡಬಹುದಾಗಿದೆ.

| ಅಂತರ (ಸಾಲಿನಿಂದ ಸಾಲಿಗೆ x ಗಿಡದಿಂದ ಗಿಡಕ್ಕೆ) | | | |
|---|---|---|---|
| 1. ಗಿಡಗಳು | 2.0 ಮೀ x 2.0 ಮೀ<br>ಅಥವಾ 2.4 ಮೀ x 2.4 ಮೀ | | 1000<br>694 |
| 2. ಸಾವಯವ ಗೊಬ್ಬರ | (ಪ್ರತೀ ಗಿಡಕ್ಕೆ/ ಪ್ರತೀ ವರ್ಷ) | | 20. ಕಿ.ಗ್ರಾಂ. |
| 3. ರಾಸಾಯನಿಕ ಗೊಬ್ಬರ | (ಪ್ರತೀ ಗಿಡಕ್ಕೆ ಗ್ರಾಂ. ಗಳಲ್ಲಿ) | | |
| | 1 ವರ್ಷದ ಗಿಡಗಳಿಗೆ | 2 ವರ್ಷದ ಗಿಡಗಳಿಗೆ | 3 ವರ್ಷದ ಗಿಡಗಳಿಗೆ |
| ಅ) ಯೂರಿಯಾ ಅಥವಾ ನೆಲಗಡಲೆ ಹಿಂಡಿ | 65<br>430 | 130<br>860 | 260<br>1290 |
| ಆ) ಶಿಲಾ ರಂಜಕ | 240 | 480 | 960 |
| ಇ) ಮ್ಯೂರೇಟ್ ಆಫ್ ಪೊಟ್ಯಾಷ್ | 100 | 200 | 400 |

**ಸೂಚನೆ:** ಸಾರಜನಕವನ್ನು ನೆಲಗಡಲೆ ಹಿಂಡಿಯ ರೂಪದಲ್ಲಿ ಕೊಡುವಾಗ ನೆಲಗಡಲೆ ಹಿಂಡಿಯನ್ನು ನೀರು ಮತ್ತು ಸಗಣಿ ಜೊತೆ ಮಿಶ್ರ ಮಾಡಿ ಒಂದು ವಾರಗಳ ಕಾಲ ಕೊಳೆಸಿ ಗಿಡಗಳಿಗೆ ಪ್ರತಿ ತಿಂಗಳು ಸಮ ಕಂತುಗಳಲ್ಲಿ ನೀಡಬೇಕು.

**ಭೂಮಿ ಸಿದ್ಧತೆ:** ಆಯ್ಕೆ ಮಾಡಿಕೊಂಡ ಪ್ರದೇಶವನ್ನು ಸ್ವಚ್ಛ ಮಾಡಿಕೊಂಡು ನಂತರ ಸೂಕ್ತ ಅಂತರದಲ್ಲಿ 2 ಅಡಿ ಆಳದ ಗುಣಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಉಡುಪಿ ಮಲ್ಲಿಗೆಗೆ ಅಂತರ 5 ಅಡಿ x 5 ಅಡಿ ಶಿಫಾರಸ್ಸು ಇದ್ದರೂ ಕರಾವಳಿ ಪ್ರದೇಶದಲ್ಲಿ ಗಿಡದ ಬೆಳವಣಿಗೆ ಚೆನ್ನಾಗಿರುವುದರಿಂದ ರೈತರು ಸಾಲಿನಿಂದ ಸಾಲಿಗೆ 8 ಅಡಿ ಮತ್ತು ಗಿಡದಿಂದ ಗಿಡಕ್ಕೆ 8 ಅಡಿ ಅಂತರವನ್ನು ನೀಡುವುದು ವಾಡಿಕೆ. ಗುಣಿ ತೆಗೆದ ಒಂದೆರಡು ವಾರಗಳ ನಂತರ ಮೇಲ್ಮಣ್ಣಿನ ಜೊತೆ 20 ಕಿ.ಗ್ರಾಂ.ನಷ್ಟು ಚೆನ್ನಾಗಿ ಕೊಳೆತ ಪುಡಿಯಾದ ಹಸುವಿನ ಅಥವಾ ಎಲೆಗೊಬ್ಬರವನ್ನು ಮಿಶ್ರ ಮಾಡಿ ತುಂಬಬೇಕು. ಗುಣಿಗಳನ್ನು ತುಂಬಿದ ನಂತರ ಪ್ರತಿ ಗುಣಿಗೆ ನೀರು ಕೊಟ್ಟಲ್ಲಿ ಮಿಶ್ರಣ ಚೆನ್ನಾಗಿ ಕುಳಿತುಕೊಳ್ಳುತ್ತದೆ.

ಈ ಮೇಲಿನ ಎಲ್ಲಾ ಕಾರ್ಯಗಳು ಮುಗಿದ ನಂತರ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಬೆಳೆಸಿದ ಮಲ್ಲಿಗೆ ಗಿಡವನ್ನು ತೊಟ್ಟೆಯಿಂದ ಹೊರತೆಗೆದು ಗುಣಿಯ ಮಧ್ಯಭಾಗದಲ್ಲಿ ನೆಟ್ಟು ಆಸರೆಯನ್ನು ಕೊಡಬೇಕು. ನಾಟಿಯನ್ನು ಸಂಜೆಯ ತಂಪು ಹೊತ್ತಿನಲ್ಲಿ ಮಾಡುವುದು ಸೂಕ್ತ. ಶಿಫಾರಸ್ಸು ಮಾಡಿದ ರಸಗೊಬ್ಬರಗಳನ್ನು 2 ಸಮಕಂತುಗಳಲ್ಲಿ ಮಾರ್ಚ್-ಏಪ್ರಿಲ್ ಮತ್ತು ಸೆಪ್ಟೆಂಬರ್ – ಅಕ್ಟೋಬರ್ ತಿಂಗಳಲ್ಲಿ ಕೊಡಬೇಕು.

**ನೀರು ನಿರ್ವಹಣೆ:** ಉಡುಪಿ ಮಲ್ಲಿಗೆ ವರ್ಷ ಪೂರ್ತಿ ಹೂ ಕೊಡುವುದರಿಂದ ಪ್ರತಿ ದಿನ ಅಥವಾ 2–3 ದಿನಗಳಿಗೊಮ್ಮೆ ಹದವರಿತು ನೀರು ಉಣಿಸುವುದು ಸೂಕ್ತ. ಪ್ರತಿ ಬಾರಿ ಗೊಬ್ಬರ ನೀಡುವಾಗ ಗಿಡಗಳಿಗೆ ನೀರು ಉಣಿಸಬೇಕು. ಹೂ ಬಿಡುವ ಅವಧಿಯಲ್ಲಿ ಪ್ರತಿ ದಿನ ಸ್ವಲ್ಪ ಪ್ರಮಾಣದಲ್ಲಿ ನೀರು ಕೊಡುವುದು ಒಳ್ಳೆಯದು. ಮಲ್ಲಿಗೆಗೆ ನೀರನ್ನು ಹನಿ ನೀರಾವರಿ ಮುಖಾಂತರ ನೀಡುವಾಗ ಪ್ರತಿ ಗಿಡಕ್ಕೆ ಪ್ರತಿ ದಿನ 6–8 ಲೀ. ನಷ್ಟು ಕೊಡಬೇಕು. ಮಳೆಗಾಲದಲ್ಲಿ ಸರಾಗವಾಗಿ ನೀರು ಬಸಿದು ಹೋಗಲು ಸೂಕ್ತ ಆಳದ ಬಸಿಗಾಲುವೆಗಳನ್ನು ನಿರ್ಮಿಸುವುದು.

**ಮಧ್ಯಂತರ ಬೇಸಾಯ ಕ್ರಮಗಳು**

**ಕಳೆ ತೆಗೆಯುವಿಕೆ:** ಕಳೆಗಳು ಭೂಮಿಯ ಮೇಲ್ಪದರದಲ್ಲಿರುವ ಸಾರಾಂಶವನ್ನು ಹೀರುವುದರಿಂದ ವರ್ಷಕ್ಕೆ ಎರಡು ಬಾರಿ ಬಳ್ಳಿಯ ಸುತ್ತ ಸಣ್ಣದಾಗಿ ಅಗತೆ ಮಾಡಿ ಕಳೆಗಳನ್ನು ನಿಯಂತ್ರಿಸಬಹುದು. ಇದರಿಂದ ಕಳೆಗಳು ಮಲ್ಲಿಗೆ ಗಿಡಗಳ ಜೊತೆ ಆಹಾರ ಪೈಪೋಟಿ ನಡೆಸುವುದನ್ನು ತಪ್ಪಿಸಬಹುದು.

**ಮಣ್ಣಿನ ಸಂರಕ್ಷಣೆ:** ಇಳಿಜಾರು ಪ್ರದೇಶಗಳಲ್ಲಿ ಮಲ್ಲಿಗೆಯನ್ನು ಬೆಳೆದಾಗ ನೀರಿನಿಂದ ಮೇಲ್ಮಣ್ಣು ಕೊಚ್ಚಿ ಹೋಗದಂತೆ ಅಡ್ಡ ಬದುಗಳನ್ನು ಹಾಕಬೇಕು. ಬೇಸಿಗೆಯಲ್ಲಿ ಮಲ್ಲಿಗೆಯ ಬೇರುಗಳು ಒಣಗದಂತೆ ಬುಡದಲ್ಲಿ ತರಗೆಲೆಗಳನ್ನು ಹರಡಿದರೆ ಭೂಮಿಯ ತೇವಾಂಶವನ್ನು ಕಾಪಾಡುತ್ತದೆ ಮತ್ತು ತರಗೆಲೆ ಕಾಲಕ್ರಮೇಣ ಸಾವಯವ ಗೊಬ್ಬರವಾಗಿ ಪರಿವರ್ತನೆಯಾಗಿ ಗಿಡಗಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

**ಸುಣ್ಣದ ಬಳಕೆ:** ಕರಾವಳಿಯ ಮಣ್ಣು ಹುಳಿಯಾಗಿರುವುದರಿಂದ ಮಣ್ಣಿನ ರಸಸಾರವನ್ನು ಸರಿಯಾದ ಪ್ರಮಾಣದಲ್ಲಿಡಲು ಹಾಗೂ ಗಿಡಗಳಿಗೆ ಒದಗಿದ ಪೋಷಕಾಂಶಗಳು ಬಳ್ಳಿಗೆ ದೊರಕಲು ಪ್ರತಿ ವರ್ಷ ರಸಗೊಬ್ಬರಗಳನ್ನು ಕೊಡುವ ಮುಂಚೆ ಪ್ರತಿ ಗಿಡದ (ಮೂರು ವರ್ಷದ) ಬುಡಕ್ಕೆ 25–500 ಗ್ರಾಂ. ಪುಡಿ ಸುಣ್ಣವನ್ನು ಮಣ್ಣಿನಲ್ಲಿ ಬೆರೆಸುವುದರಿಂದ ಮಣ್ಣಿನ ರಸಸಾರವನ್ನು ತಹಬದಿಗೆ (ತಟಸ್ಥ) ತರಲು ಸಾಧ್ಯವಾಗುತ್ತದೆ.

**ಮೊಗ್ಗು ಚಿವುಟುವುದು:** ಮಲ್ಲಿಗೆ ಗಿಡಗಳು ನಾಟಿ ಮಾಡಿದ ಹೊಸ ಚಿಗುರಿನ ಜೊತೆ ಹೂಗಳನ್ನು ಬಿಡುತ್ತವೆ. ಆದರೆ ಗಿಡ ಚೆನ್ನಾಗಿ ಬೆಳೆಯುವ ಮುಂಚೆಯೇ ಹೂಗಳನ್ನು ಅರಳಲು ಬಿಟ್ಟರೆ ಗಿಡಗಳ ಬೆಳವಣಿಗೆ ಕುಂಠಿತವಾಗುತ್ತದೆ. ಆದ್ದರಿಂದ ಗಿಡ ನೆಟ್ಟ 6 ತಿಂಗಳವರೆಗೆ ಮೊಗ್ಗುಗಳನ್ನು ಚಿವುಟಿ ಹಾಕಬೇಕು.